ಆ) ಹಾಗಿದ್ದಲ್ಲಿ, ಅದಕ್ಕಾಗಿ ಮಾರುಕಟ್ಟೆಯ ಪಕ್ಕದಲ್ಲಿ ಜಮೀನನ್ನು ಖರೀದಿ ಸಲಾಗಿದೆಯೇ;

ಇ) ಎಷ್ಟು ಎಕರೆ ಜಮೀನನ್ನು, ಎಷ್ಟು ಮೊತ್ತಕ್ಕೆ ಯಾವಾಗ ಖರೀದಿಸಲಾಗಿದೆ;

ಈ) ಈ ಮಾರುಕಟ್ಟೆಯನ್ನು ಮೇಲ್ದರ್ಜೆಗೇರಿಸುವುದರಿಂದ ರೈತರಿಗೆ ಮತ್ತು ವ್ಯಾಪರಿಗಳಿಗೆ ಅನುಕೂಲವಾಗುವುದಿಲ್ಲವೇ;

ಉ) ಹಾಗಿದ್ದಲ್ಲಿ, ಈ ಮಾರುಕಟ್ಟೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಹಾಗೂ ರೇಷ್ಮೆ ಸಚಿವರು)

ಉತ್ತರ

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಖರೀದಿಸಲಾಗಿಲ್ಲ.

ಹಾಲಿ ಮಾರುಕಟ್ಟೆಗೆ ಹೊಂದಿಕೊಂಡಿರುವ ಕಸಬಾ ಹೋಬಳಿ ಬೋಳಪ್ಪನಹಳ್ಳಿ ಅಮಾನಿಕೆರೆಯ 3.11 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ ಮುಖಾಂತರ ಭೂ ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಇ) ಸದರಿ 3.11 ಎಕರೆ ಜಮೀನಿಗೆ ಕೆ.ಐ.ಎ.ಡಿ.ಬಿ ರವರು ತಾತ್ಕಾಲಿಕ ಭೂ ಮೌಲ್ಯ ಹಾಗೂ ಸೇವಾ ಶುಲ್ಕ ಸೇರಿ ರೂ.1,23,22,188/- ನಿಗದಿಪಡಿಸಿದೆ.

ಈ) ಅನುಕೂಲವಾಗಲಿದೆ.

ಉ) ಅಗತ್ಯ ಜಮೀನನ್ನು ಕೆ.ಐ.ಎ.ಡಿ.ಬಿ ರವರು ಸ್ವಾಧೀನ ಪಡಿಸಿಕೊಂಡು ಇಲಾಖೆಗೆ ಹಸ್ತಾಂತರಿಸಿದ ನಂತರ ವಂಟನೆ ಲಭ್ಯತೆಯ ಅನುಸಾರ ಆಧುನಿಕ ಸೌಲಭ್ಯಗಳಿರುವ ಹೈಟೆಕ್ ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಮುದ್ದೇಬಿಹಾಳ – ಆಲಮಟ್ಟಿ ಮುಖ್ಯರಸ್ತೆ.

(561)

ಶ್ರೀ ಅಪ್ಪಾಜಿ ಚೆನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಪ್ರಶ್ನೆ

ಅ) ಮುದ್ದೇಬಿಹಾಳ – ಆಲಮಟ್ಟಿ ಮುಖ್ಯರಸ್ತೆಯು ಸಂಚಾರಕ್ಕೆ ಯೋಗ್ಯ ಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ ಮೂರು ವರ್ಷಗಳಲ್ಲಿ ಈ ರಸ್ತೆಗೆ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಹಣವೆಷ್ಟು;

ಇ) ಈ ರಸ್ತೆಯನ್ನು ದುರಸ್ಥಿ ಮಾಡಿ ಸಂಚಾರಕ್ಕೆ ಯೋಗ್ಯ ಮಾಡಲು ಸರ್ಕಾರವು ಯೋಗ್ಯ ಮಾಡಲು ಸರ್ಕಾರವು ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು).

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು)

ಉತ್ತರ

ಅ) ಗಮನಕ್ಕೆ ಬಂದಿದೆ.

ಆ) ಮುದ್ದೇಬಿಹಾಳ – ಆಲಮಟ್ಟಿ ರಸ್ತೆಗೆ ಕಳೆದ 3 ವರ್ಷದಲ್ಲಿ ದುರಸ್ತಿಗಾಗಿ ಮಾಡಿರುವ ವೆಚ್ಚ ರೂ.137.30 ಲಕ್ಷ.

ಇ) ಸದರಿ ರಸ್ತೆಯ ದುರಸ್ತಿಗಾಗಿ ಪ್ರಸಕ್ತ ಸಾಲಿನಲ್ಲಿ ರೂ.117.00 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ. ಹಾಗೂ ಸದರಿ ರಸ್ತೆಯ ದುರಸ್ತಿ ಕಾಮಗಾರಿ ಪೂರ್ಣಗೊಂಡು ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಈ ರಸ್ತೆಯ ಮುಂದಿನ ಅಭಿವೃದ್ಧಿಗಾಗಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ.

ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ನಾಲೆಗಳ ಆಧುನೀಕರಣ

288 : (143)

ಶ್ರೀಮತಿ ಕಲ್ಪನಾ ಸಿದ್ದರಾಜು

ಪ್ರಶ್ನೆ

ಅ) ಮದ್ದೂರು ತಾಲ್ಲೂಕು ಕೆ.ಆರ್.ಎಸ್. ಅಚ್ಚುಕಟ್ಟು ಪ್ರದೇಶದ ನಾಲೆಗಳ ಆಧುನೀಕರಣ ಕಾಮಗಾರಿಗಾಗಿ ಸರ್ಕಾರ ಮಂಜೂರು ಮಾಡಿರುವ ಮೊತ್ತವೆಷ್ಟು;

ಆ) ಈ ಕಾಮಗಾರಿಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ (ಕಾಮಗಾರಿವಾರು ವಿವರಗಳನ್ನು ನೀಡುವುದು)

ಇ) ಈ ಪ್ರದೇಶದ ಎಲ್ಲಾ ನಾಲೆಗಳ ಆಧುನೀಕರಣ ಪೂರ್ಣಗೊಳಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು? (ವಿವರಗಳನ್ನು ನೀಡುವುದು)